ಕರ್ನಾಟಕ ಸರ್ಕಾರ

# ಭ್ರಷ್ಟಾಚಾರ ನಿಗ್ರಹ ದಳ

## ಪತ್ರಿಕಾ ಪ್ರಕಟಣೆ

ದಿನಾಂಕ 21/03/2019.

ಮಂಗಳೂರು ತಾಲೂಕು ಪ್ರಥಮ ದರ್ಜೆ ವಿದ್ಯುತ್ ಗುತ್ತಿಗೆದಾರರೊಬ್ಬರು ಇವರು ವಹಿಸಿಕೊಂಡ ಹೆಚ್ಚುವರಿ ವಿದ್ಯುತ್ ಸಂಪರ್ಕ ಮತ್ತು ಹೊಸ ವಿದ್ಯುತ್ ಸಂಪರ್ಕ ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಶ್ರೀ.ರಾಘವ.ಡಿ, ಕಿರಿಯ ಇಂಜಿನಿಯರ್(ವಿ), ಶಾಖಾಧಿಕಾರಿಗಳು, ಮೆಸ್ಕಾಂ, ಬೈಕಂಪಾಡಿ ಶಾಖಾ ಕಛೇರಿ, ಮಂಗಳೂರು ರವರು ಸದರಿ ಕಡತಗಳಿಗೆ ಅನುಮತಿ ನೀಡಲು ರೂ.5,000/- ಲಂಚದ ಹಣ ಕೊಡುವಂತೆ ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕ:20/03/2019 ರಂದು ರಾಘವ.ಡಿ, ಕಿರಿಯ ಇಂಜಿನಿಯರ್(ವಿ), ಶಾಖಾಧಿಕಾರಿಗಳು, ಮೆಸ್ಕಾಂ, ಬೈಕಂಪಾಡಿ ಶಾಖಾ ಕಛೇರಿ, ಮಂಗಳೂರು ರವರು ದೂರುದಾರರಿಂದ ರೂ.5,000/- ಲಂಚದ ಹಣವನ್ನು ಪಡೆಯುತ್ತಿದ್ದಾಗ ದಕ್ಷಿಣ ಕನ್ನಡ ಜಿಲ್ಲಾ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳಿಗೆ ಸಿಕ್ಕಿಬಿದ್ದಿರುತ್ತಾರೆ. ಆರೋಪಿತರನ್ನು ದಸ್ತಗಿರಿ ಮಾಡಿ, ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ, ತನಿಖೆ ಮುಂದುವರೆದಿದೆ.